# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 974 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 17-12-2024 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr>
<td>ಅ)</td>
<td>ಕೋಲಾರ ನಗರಸಭೆಗೆ ಕಳೆದ ಮೂರು ವರ್ಷ ದಿಂದಗಳಿಂದ ಇಲ್ಲಿಯವರೆಗೂ ಸ್ವಚ್ಛ ಭಾರತ ಮಿಷನ್-1.0 ಯೋಜನೆಯಡಿಯಲ್ಲಿ ಎಷ್ಟು ಅನುದಾನ ಬಂದಿದೆ; ಈ ಅನುದಾನವನ್ನು ಯಾವ ಯಾವ ಕಾಮಗಾರಿಗೆ ಮತ್ತು ಖರೀದಿಗಳಿಗೆ ಬಳಸಿಕೊಳ್ಳಲಾಗಿದೆ;</td>
<td>ಸ್ವಚ್ಛ ಭಾರತ್ ಮಿಷನ್ (ನಗರ)-1.0 ಯೋಜನೆಯಡಿಯಲ್ಲಿ ಕೋಲಾರ ನಗರಸಭೆಗೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ರೂ. 595.66 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ.<br>(ರೂ. ಲಕ್ಷಗಳಲ್ಲಿ)
<table>
<tr><th>ಕ್ರ. ಸಂ.</th><th>ವರ್ಷ</th><th>ಬಿಡುಗಡೆಯಾಗಿರುವ ಒಟ್ಟು ಮೊತ್ತ</th></tr>
<tr><td>1</td><td>2021-22</td><td>0.00</td></tr>
<tr><td>2</td><td>2022-23</td><td>595.66</td></tr>
<tr><td>3</td><td>2023-24</td><td>0.00</td></tr>
<tr><td></td><td>ಒಟ್ಟು</td><td>595.66</td></tr>
</table>
ಸದರಿ ಅನುದಾನವನ್ನು ಯಾವ ಯಾವ ಕಾಮಗಾರಿಗೆ ಮತ್ತು ಖರೀದಿಗೆ ಬಳಸಿಕೊಳ್ಳಲಾಗಿದೆ ಎಂಬ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.</td>
</tr>
<tr>
<td>ಆ)</td>
<td>ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಂಬಂಧಿಸಿದಂತೆ ಇ.ವಿ. ಚಾರ್ಜಿಂಗ್ ಪಾಯಿಂಟ್, ಸಿ.ಸಿ.ಟಿ.ವಿ. ಕ್ಯಾಮೆರಾ ಸೇರಿದಂತೆ ಖರೀದಿಸಿರುವುದರಲ್ಲಿ ಸುಮಾರು ರೂ. 2.4 ಕೋಟಿಗೂ ಹೆಚ್ಚು ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td>
<td>ಹೌದು ಬಂದಿದೆ.<br><br>ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಂಬಂಧಿಸಿದಂತೆ ರೂ. 2.40 ಕೋಟಿ ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ;<br><br>(Rs. in Lakh)
<table>
<tr><th>Sl No</th><th>Machinery/ Equipment Details</th><th>Quantity (Nos.)</th><th>Estimated Amount</th></tr>
<tr><td>1</td><td>Electrical Minitipper</td><td>6</td><td>98.00</td></tr>
<tr><td>2</td><td>Tractor Engine</td><td>2</td><td>20.00</td></tr>
<tr><td>3</td><td>Pushcarts</td><td>15</td><td>5.50</td></tr>
<tr><td>4</td><td>Wheel barrow</td><td>12</td><td>3.0</td></tr>
<tr><td>5</td><td>Front end loader with hoe</td><td>1</td><td>48.00</td></tr>
<tr><td>6</td><td>Compactor</td><td>1</td><td>51.00</td></tr>
<tr><td>7</td><td>CC Cameras</td><td>6</td><td>6.50</td></tr>
<tr><td>8</td><td>Charging point for EV Vehicles</td><td>2</td><td>8.00</td></tr>
<tr><td colspan="2">Total</td><td>45</td><td>240.00</td></tr>
</table>
ಮೇಲ್ಕಂಡ ಕ್ರ.ಸಂ. (1) ರಿಂದ (7) ರವರೆಗೆ</td>
</tr>
</table>

| | | |
|---|---|---|
| | | ಘಟಕಗಳನ್ನು ನಿಯಮಾನುಸಾರ ದರಗಳ ಅನುಮೋದನೆ ಪಡೆದು ಅಂದಾಜುಪಟ್ಟಿ ತಯಾರಿಸಿ ನಿಯಮಾನುಸಾರ GeM ಪೋರ್ಟಲ್‌ನಲ್ಲಿ ಖರೀದಿಸಿರುತ್ತಾರೆ.<br><br>ಆದರೆ ಕ್ರ.ಸಂ. (8)ರ ಎಲೆಕ್ಟ್ರಿಕಲ್ ವೆಹಿಕಲ್ ಚಾರ್ಜಿಂಗ್ ಪಾಯಿಂಟ್ ಗೆ (Charging point for EV Vehicles) ಎಸ್.ಆರ್. ದರಗಳು ಲಭ್ಯವಿಲ್ಲದಿರುವುದರಿಂದ ಕೊಟೇಷನ್ ದರಗಳನ್ನು ಪಡೆದು ಸಕ್ಷಮ ಪ್ರಾಧಿಕಾರದಿಂದ ದರಗಳಿಗೆ ಅನುಮೋದನೆ ಪಡೆದು, ಅದರಂತೆ ಅಂದಾಜುಪಟ್ಟಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಪಡೆದು ಟೆಂಡರ್ ಕೆರೆಯಬೇಕಿರುತ್ತದೆ.<br><br>ಆದರೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ರವರು ನೇರವಾಗಿ ಪ್ಯಾಕೇಜ್ ನಲ್ಲಿಯೇ ಇ.ವಿ. ಚಾರ್ಜಿಂಗ್ ಪಾಯಿಂಟ್ ಅನ್ನು ನಮೂದಿಸಿ ಟೆಂಡರ್ ಕರೆದಿರುತ್ತಾರೆ ಎಂದು ವರದಿ ಮಾಡಿ ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ ರವರು ಶ್ರೀ ಎ.ಆರ್. ದಿಲೀಪ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ), ನಗರಸಭೆ ಕೋಲಾರ ಇವರನ್ನು ಅಮಾನತುಗೊಳಿಸುವಂತೆ ಶಿಫಾರಸ್ಸು ಮಾಡಿ ದಿನಾಂಕ: 22-10-2024 ರಂದು ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು, ನಿಯಮಾನುಸಾರ ಪರಿಶೀಲಿಸಿ ಶ್ರೀ ಎನ್.ಆರ್. ದಿಲೀಪ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ನಗರಸಭೆ ಕೋಲಾರ ರವರು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಸದರಿಯವರ ವಿರುದ್ಧ ದಿನಾಂಕ: 02.12.2024 ರಂದು ಸಲ್ಲಿಸಿರುವ ಶಿಸ್ತು ಪ್ರಸ್ತಾವನೆಯನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಿ ಸರ್ಕಾರದ ಆದೇಶ ಸಂಖ್ಯೆ: ನಅಇ 84 ಬಿಎಂಎಸ್ 2024(ಇ). ದಿನಾಂಕ: 09.12.2024ರಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 10(1)(ಡಿ)ರಡಿ ಶ್ರೀ ಎ.ಆರ್. ದಿಲೀಪ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ), ನಗರಸಭೆ ಕೋಲಾರ ರವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ. |

<table>
<tr>
<td>ಇ)</td>
<td>ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ ಇದುವರೆಗೂ ಖರೀದಿ ಮಾಡಲಾಗಿರುವ ಪರಿಕರಗಳು ಯಾವುವು; ಹಾಗೂ ಖರೀದಿ ಮಾಡುವ ಸಂದರ್ಭದಲ್ಲಿ ಯಾವ ನೀತಿ ನಿಯಮಗಳನ್ನು ಅಳವಡಿಸಿಕೊಳ್ಳಲಾಗಿದೆ:</td>
<td>ಸ್ವಚ್ಛ ಭಾರತ ಮಿಷನ್ (ನ) – 1.0 ಯೋಜನೆಯಡಿಯಲ್ಲಿ ಖರೀದಿ ಮಾಡಲಾಗಿರುವ ಪರಿಕರಗಳ ವಿವರ ಈ ಕೆಳಕಂಡಂತಿದೆ.<br><br>1. 06 ಸಂಖ್ಯೆಯ ವಿದ್ಯುತ್ ಚಾಲಿತ ಮಿನಿ ಟಿಪ್ಪರ್‌ಗಳು.<br>2. 02 ಸಂಖ್ಯೆಯ ಟ್ರಾಕ್ಟರ್ ಇಂಜಿನ್‌ಗಳು.<br>3. ತಳ್ಳುಗಾಡಿ (Push Cart) ಗಳು.<br>4. ವೀಲ್ ಬ್ಯಾರೋಗಳು.<br>5. ಫ್ರಂಟ್ ಎಂಡ್ ಲೋಡರ್ ವಿತ್ ಬ್ಯಾಕ್‌ಹೋ ವಾಹನ.<br>6. ಕಾಂಪ್ಯಾಕ್ಟರ್ ವಾಹನ.<br>7. ಸಿ.ಸಿ. ಕ್ಯಾಮರಾಗಳು.<br><br>ಸದರಿ ಮೇಲ್ಕಂಡ ಪರಿಕರಗಳನ್ನು GeM Portal (Government e-Marketplace) ಮೂಲಕ ಖರೀದಿ ಮಾಡಲಾಗಿರುತ್ತದೆ.</td>
</tr>
<tr>
<td>ಈ)</td>
<td>ಪರಿಕರಗಳನ್ನು ಸರಬರಾಜು ಮಾಡಲು ಟೆಂಡರ್ ಕರೆಯಲಾಗಿತ್ತೆ; ಹಾಗಿದ್ದರೆ, ಟೆಂಡರ್‌ನಲ್ಲಿ ಭಾಗವಹಿಸಿದಂತಹ ಗುತ್ತಿಗೆದಾರರು ಯಾರ್ಯಾರು? (ಸಂಪೂರ್ಣ ಮಾಹಿತಿ ಒದಗಿಸುವುದು)</td>
<td>ಸದರಿ ಪರಿಕರಗಳನ್ನು ಸರಬರಾಜು ಮಾಡಲು ಜೆಮ್ (GeM) ಪೋರ್ಟಲ್ ನಲ್ಲಿ ಈ ಕೆಳಕಂಡಂತೆ ಟೆಂಡರ್ ಕರೆಯಲಾಗಿರುತ್ತದೆ.<br><br>
<table>
<tr><th>ಕ್ರ. ಸಂ.</th><th>ಪರಿಕರಗಳು</th><th>ಭಾಗವಹಿಸಿರುವ ಗುತ್ತಿಗೆದಾರರು</th></tr>
<tr><td>ಪ್ಯಾಕೇಜ್-1</td><td>1. ಟ್ರಾಕ್ಟರ್ ಇಂಜಿನ್‌ಗಳು.<br>2. Front End with Back Hoe Loader<br>3. ಕಾಂಪ್ಯಾಕ್ಟರ್ ವಾಹನ,<br>4. ಸಿ.ಸಿ ಕ್ಯಾಮರಾಗಳು,<br>5. charging point for EV vehicles</td><td>1. ರೇ-ಇಂಜಿನಿಯರಿಂಗ್ & ಫ್ಯಾಬ್ರಿಕೇಟರ್ಸ್.<br>2. ಆಲ್ಫಾ ಟೆಕ್ನಾಲಜೀಸ್<br>3. ತೇಜಸ್ವಿನಿ ಸಲೂಷನ್ಸ್.</td></tr>
<tr><td>ಪ್ಯಾಕೇಜ್-2</td><td>1. ವಿದ್ಯುತ್ ಚಾಲಿತ ಮಿನಿ ಟಿಪ್ಪರ್ ವಾಹನ,<br>2. ತಳ್ಳುಗಾಡಿಗಳು<br>3. ವೀಲ್ ಬ್ಯಾರೋಗಳು</td><td>1. ರೇ-ಇಂಜಿನಿಯರಿಂಗ್ & ಫ್ಯಾಬ್ರಿಕೇಟರ್ಸ್.<br>2. ಆಲ್ಫಾ ಟೆಕ್ನಾಲಜೀಸ್<br>3. ತೇಜಸ್ವಿನಿ ಸಲೂಷನ್ಸ್.</td></tr>
</table>
</td>
</tr>
</table>

(ಕಡತ ಸಂಖ್ಯೆ: ನಅಇ 257 ಸಿಎಸ್‌ಎಸ್ 2024)

**(ರಹೀಂ ಖಾನ್)**

ಪೌರಾಡಳಿತ ಹಾಗೂ ಹಜ್ ಸಚಿವರು

## ಅನುಬಂಧ-1

| ಕಾಮಗಾರಿಯ ವಿವರ | ಗುತ್ತಿಗೆ ಮೊತ್ತ (ಲಕ್ಷಗಳಲ್ಲಿ) | ವೆಚ್ಚ ಮಾಡಲಾದ ಮೊತ್ತ |
|---|---|---|
| ಲ್ಯಾಂಡ್ ಫಿಲ್ ಸೈಟ್‌ನ ಸಮಗ್ರ ಅಭಿವೃದ್ಧಿ | 615.49 | 475.22 |
| ಕೋಲಾರ CMC ಯಲ್ಲಿ EV ವಾಹನಗಳಿಗೆ 2 ಸಂಖ್ಯೆಯ ಚಾರ್ಜಿಂಗ್ ಪಾಯಿಂಟ್ ಗಳನ್ನು ಖರೀದಿಸುವುದು | 8.00 | 8.00 |
| ಕೋಲಾರ ನಗರಸಭೆಗೆ 15 ಸಂಖ್ಯೆಯ ಪುಷ್ ಕಾರ್ಟ್ ಗಳನ್ನು ಖರೀದಿಸುವುದು. | 5.50 | 5.46 |
| ಕೋಲಾರ ನಗರಸಭೆಗೆ 12 ಸಂಖ್ಯೆಯ ವೀಲ್ ಬ್ಯಾರೋ ಗಳನ್ನು ಖರೀದಿಸುವುದು | 3.00 | 2.96 |
| ಕೋಲಾರ ನಗರಸಭೆಗೆ 1 ಸಂಖ್ಯೆ ಫ್ರಂಟ್ ಎಂಡ್ ವಿತ್ ಬ್ಯಾಕ್ ಹೋ ಲೋಡರ್ ಗಳನ್ನು ಖರೀದಿಸುವುದು | 48.00 | 47.27 |
| ಕೋಲಾರ 1 ಸಂಖ್ಯೆ ಕಾಂಪ್ಯಾಕ್ಟರ್ ನ್ನು ಖರೀದಿಸುವುದು | 50.66 | 47.67 |
| ಕೋಲಾರ ನಗರಸಭೆಗೆ 6 ಸಂಖ್ಯೆ ಸಿ.ಸಿ ಕ್ಯಾಮೆರಾಗಳನ್ನು ಖರೀದಿಸುವುದು | 6.50 | 6.49 |
| **ಒಟ್ಟು** | **737.15** | **593.07** |

E.E, DMA
(SWM)